ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ
ಲಕ್ಷ್ಮೀಪುರಂ, ಮೈಸೂರು-570 004.
ದೂರವಾಣಿ: 0821-2332703,
Email :musicuniversitymys@gmail.com
Website: https://www.musicuniversity.ac.in

J.L.B. Road, Near Ashoka Circle,
Lakshmipuram, Mysuru – 570 004.
Ph.Office: 0821-2332703,
Registrar-Mobile No.:9880761877
Email : registrar@musicuniversity.ac.in

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 40 ನೇ ಸಭೆಯು (2022-23 ನೇ ಸಾಲಿನ 3 ನೇ ಸಭೆ) ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:22.12.2022 ರ ಗುರುವಾರದಂದು ಬೆಳಗ್ಗೆ 11.00 ಗಂಟೆಗೆ ಜರುಗಿದ್ದು ಸದರಿ ಸಭೆಯ ನಡಾವಳಿ.

**ಸಭೆಯಲ್ಲಿ ಹಾಜರಿದ್ದವರು.**

| ಕ್ರಸಂ | ಹೆಸರು ಮತ್ತು ವಿಳಾಸ | ಪದನಾಮ |
|---|---|---|
| 01 | ಪ್ರೊ. ನಾಗೇಶ್ ವಿ. ಬೆಟ್ಟಕೋಟೆ<br>ಮಾನ್ಯ ಕುಲಪತಿಗಳು<br>ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್<br>ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು. | ಅಧ್ಯಕ್ಷರು |
| 02 | ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು<br>ಆರ್ಥಿಕ ಇಲಾಖೆ, ವಿಧಾನಸೌಧ, 2 ನೇ ಮಹಡಿ,<br>ಡಾ. ಬಿ. ಆರ್. ಅಂಬೇಡ್ಕರ್ ವೀದಿ,<br>ಬೆಂಗಳೂರು-560 001 ಇವರ ಪರವಾಗಿ<br>ಶ್ರೀಮತಿ ಉಮಾ .ಕೆ<br>ಸರ್ಕಾರದ ಉಪ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ | ಸದಸ್ಯರು |
| 03 | ಪ್ರೊ. ಡಿ. ಶಿವಲಿಂಗಯ್ಯ<br>ವಿಶ್ರಾಂತ ಕುಲಪತಿಯವರು, ಶೃಂಗಾರ, ಮನೆ ನಂ. 9-75/3<br>(20) ಕಂಕಣಾಡಿ 'ಬಿ' ಬಜಾಲ್ ಪೋಸ್ಟ್<br>ಮಂಗಳೂರು-575 007 | ಸದಸ್ಯರು |
| 04 | ಡಾ. ರವೀಂದ್ರ ಕಾಟೋಟಿ<br>#209, ಅದ್ವೈತ ವಿಬ್ರಂತ್<br>93/D ಡಿಜಿಟಲ್‌ಪಾರ್ಕ್ ರಸ್ತೆ,<br>ಯಶವಂತ್‌ಪುರ್ ಇಂಡಸ್ಟ್ರಿಯಲ್ ಸಬ್‌ಹರ್ಬ್<br>ಬೆಂಗಳೂರು-560 022 | ಸದಸ್ಯರು |
| 05 | ಶ್ರೀಮತಿ ಶೋಭಾ ಹೆಚ್.ಜಿ<br>ನಂ. 114, ಹಯವದನರಾವ್ ರಸ್ತೆ<br>ಗವಿಪುರಂ ಎಕ್ಸಟೆನ್ಸನ್<br>ಬೆಂಗಳೂರು-560 01 | ಸದಸ್ಯರು |
| 06 | ಪ್ರೊ.ಟಿ.ಎಸ್. ದೇವರಾಜ<br>ಕುಲಸಚಿವರು<br>ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್<br>ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು. | ಪದನಿಮಿತ್ತ ಸದಸ್ಯಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದವರು**

| | | |
|---|---|---|
| 01 | ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಡಾ. ಬಿ. ಆರ್. ಅಂಬೇಡ್ಕರ್ ವೀದಿ<br>ಬೆಂಗಳೂರು–560 001 | ಸದಸ್ಯರು |
| 02 | ಪ್ರಧಾನ ಕಾರ್ಯದರ್ಶಿಯವರು<br>ಕನ್ನಡ ಮತ್ತು ಸಂಸ್ಕತಿ ಇಲಾಖೆ, ವಿಕಾಸಸೌಧ,<br>ಡಾ.ಬಿ.ಆರ್. ಅಂಬೇಡ್ಕರ್ ವೀದಿ,<br>ಬೆಂಗಳೂರು–560 001 | ಸದಸ್ಯರು |
| 03 | ಮಹಾನಿರ್ದೇಶಕರು<br>ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಜನಪಥ ರಸ್ತೆ,<br>ನವದೆಹಲಿ–110 002 | ಸದಸ್ಯರು |
| 04 | ಶ್ರೀ ಹೆಚ್. ಎಸ್. ಗೋಪಿನಾಥ್<br>ಮಾನ್ಯ ವಿಧಾನ ಪರಿಷತ್ತಿನ ಶಾಸಕರು<br>ನಂ.1138, 14 ನೇ ಮುಖ್ಯ ರಸ್ತೆ<br>21 ನೇ ಎ ಅಡ್ಡ ರಸ್ತೆ, 3 ನೇ ಹಂತ<br>ಹೆಚ್. ಎಸ್, ಆರ್. ಲೇಔಟ್<br>ಬೆಂಗಳೂರು–560 102. | ಸದಸ್ಯರು |
| 05 | ಶ್ರೀ ಹರ್ಷವರ್ಧನ್ .ಬಿ<br>ಮಾನ್ಯ ವಿಧಾನ ಸಭಾ ಸದಸ್ಯರು<br>ನಂ.8, ಬಿ.ಬಿ. ಅನುಗ್ರಹ, ಶಾಂತಿವನ<br>2ನೇ ಅಡ್ಡ ರಸ್ತೆ, ಸಂಜೀವಿನಿ ನಗರ<br>ಬೆರೀಸ್ ಅಪಾರ್ಟ್‌ಮೆಂಟ್ ಹಿಂಭಾಗ<br>ಹೆಬ್ಬಾಳ, ಬೆಂಗಳೂರು–560 092 | ಸದಸ್ಯರು |

ಸಭೆಯ ಆರಂಭದಲ್ಲಿ ಮಾನ್ಯ ಸಭ್ಯಾಧ್ಯಕ್ಷರು ಸಭೆಗೆ ಹಾಜರಾದ ಗೌರವಾನ್ವಿತ ಸದಸ್ಯರುಗಳಿಗೆ ಸ್ವಾಗತ ಕೋರಿದರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು, ಸದರಿ ವಿಷಯಗಳನ್ನು ಕುರಿತು ಸಭೆಯು ಕೂಲಂಕಷವಾಗಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಂಡಿತು.

| ಕ್ರ ಸಂ. | ಸಭೆಯ ವಿಷಯ ಸೂಚಿ |
|---|---|
| 1 | ದಿನಾಂಕ:03.11.2022 ರಂದು ಜರುಗಿದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 39 ನೇ ಸಭೆಯ ನಡಾವಳಿಯನ್ನು ಅನುಮೋದಿಸುವುದು ಮತ್ತು ಸ್ಥಿರಿಕರಿಸುವುದು. (2022–23 ನೇ ಸಾಲಿನ 2 ನೇ ಸಭೆಯ ನಡಾವಳಿ)<br><br>**ನಿರ್ಣಯ:– ದಿನಾಂಕ:03.11.2022 ರಂದು ಜರುಗಿದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 39 ನೇ ಸಭೆಯ ನಡಾವಳಿಯನ್ನು ಸಭೆಯು ಸುಧೀರ್ಘವಾಗಿ ಚರ್ಚಿಸಿ ವಿಷಯ ಸೂಚಿ:– 03. 04 ಮತ್ತು 05 ಈ ವಿಷಯಗಳ ಸ್ಥಿರಿಕರಣಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳನ್ನು ನಡೆಸಲು ವಿಶ್ವವಿದ್ಯಾಲಯವು ಖಾಸಗಿ ಸಂಸ್ಥೆಗಳೊಂದಿಗೆ ಹಾಗೂ ವಿಶ್ವವಿದ್ಯಾಲಯಗಳೊಂದಿಗೆ ಮಾಡಿಕೊಳ್ಳಬೇಕಾಗಿರುವ ಒಡಂಬಡಿಕೆಗೆ ಸಂಬಂಧಿಸಿದಂತೆ ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಜರುಗಿದ ಪ್ರಶಾಸನ ಸಮಿತಿ ಸಭೆಯ ನಿರ್ಮಾನದಂತೆ ಕ್ರಮವಹಿಸದಿರುವ ಬಗ್ಗೆ** |

| | |
|---|---|
| | ಗೌರವಾನ್ವಿತ ಸದಸ್ಯರಾದ ಶ್ರೀಮತಿ ಶೋಭಾ .ಹೆಚ್.ಜಿ. ಇವರು ಆಕ್ಷೇಪಿಸಿ ಇರುವ ತೊಡಕುಗಳೇನು ಎಂಬುದಾಗಿ ಸಭೆಯಲ್ಲಿ ಪ್ರಸ್ತಾಪಿಸಿ ವಿಶ್ವವಿದ್ಯಾಲಯದಿಂದ ಪರಿಶೀಲನಾ ಸಮಿತಿಗಳು ಭೇಟಿ ನೀಡಿರುವ ಸಂಸ್ಥೆಗಳಿಗೆ ಕೋರ್ಸ್‌ಗಳನ್ನು ನಡೆಸಲು ಇರುವ ತೊಂದರೆ ಕುರಿತು ಪತ್ರವನ್ನು ಬರೆಯುವಂತೆ ಆಗ್ರಹಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ವಿಶ್ವವಿದ್ಯಾಲಯವು ಕೋರ್ಸ್‌ಗಳನ್ನು ನಡೆಸಲು ಸಂಸ್ಥೆಗಳೊಂದಿಗೆ ಮಾಡಿಕೊಳ್ಳಬೇಕಾದ ಒಡಂಬಡಿಕೆಗೆ ಸಂಬಂಧಿಸಿದಂತೆ ಸರ್ಕಾರವು ಕೋರಿರುವ ಸ್ಪಷ್ಟೀಕರಣಗಳನ್ನು ಮಾನ್ಯ ಅಧ್ಯಕ್ಷರು ಗೌರವಾನ್ವಿತ ಸದಸ್ಯರ ಗಮನಕ್ಕೆ ತಂದರು. ಈ ಕುರಿತು ಸರ್ಕಾರಕ್ಕೆ ಶೀಘ್ರವಾಗಿ ಸ್ಪಷ್ಟೀಕರಣ ನೀಡಿ ಸರ್ಕಾರದಿಂದ ಅನುಮೋದನೆ ಪಡೆಯಲಾಗುವುದು ಎಂಬುದನ್ನು ಸಭೆಯ ಗಮನಕ್ಕೆ ತಂದರು. ತದನಂತರದಲ್ಲಿ ಯುಜಿಸಿಯಿಂದ ನಾಮನಿರ್ದೇಶನ ಗೊಂಡಿರುವ ಗೌರವಾನ್ವಿತ ಸಿಂಡೀಕೆಟ್ ಸದಸ್ಯರಾದ ಪ್ರೊ. ಡಿ. ಶಿವಲಿಂಗಯ್ಯ ಅವರು ದಿನಾಂಕ:03.11.2022 ರಂದು ಜರುಗಿದ ಪ್ರಶಾಸನ ಸಮಿತಿಯ 39 ನೇ ಸಭೆಗೆ ನಾನು ಗೈರು ಆಗಿದ್ದರಿಂದ ಪ್ರಶಾಸನ ಸಮಿತಿಯ 39 ನೇ ಸಭೆಯ ನಡಾವಳಿಯ ಸ್ಥಿರೀಕರಣಕ್ಕೆ ಸಂಬಂಧಿಸಿದಂತೆ ನನ್ನ ಸಹಮತಿ ಇಲ್ಲವೆಂದು ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಎಲ್ಲಾ ಗೌರವಾನ್ವಿತ ಸದಸ್ಯರು ಪ್ರಶಾಸನ ಸಮಿತಿಯ 39 ನೇ ಸಭೆಯ ನಡಾವಳಿಯನ್ನು ಸ್ಥಿರೀಕರಿಸಿ ಅನುಮೋದಿಸಿದರು.<br>ಮುಂದುವರಿದು ದಿನಾಂಕ:03.11.2022 ರಂದು ಜರುಗಿದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 39 ನೇ ಸಭೆಯ ನಡಾವಳಿಯ ವಿಷಯ ಸೂಚಿ:– 07 ರ ಸ್ಥಿರೀಕರಣಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಗೌರವಾನ್ವಿತ ಸದಸ್ಯರು ವಿಶ್ವವಿದ್ಯಾಲಯದಲ್ಲಿ ಈ ಹಿಂದೆ ಕಾರ್ಯನಿರ್ವಹಿಸಿ ವಿಶ್ವವಿದ್ಯಾಲಯದ ಸೇವೆಯಿಂದ ಹೊರಗುಳಿದಿರುವ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯವರಿಗೆ ಮಾನ್ಯ ಉಚ್ಛ ನ್ಯಾಯಾಲಯವು ಹೊರಡಿಸಿರುವ ಮಧ್ಯಾಂತರ ಆದೇಶದಂತೆ ಹಾಗೂ ಸರ್ಕಾರದ ಆದೇಶದಂತೆ ವೇತನ ಪಾವತಿಸಬೇಕೆ ಎಂಬ ವಿಷಯವು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ನಂತರ ವೇತನ ಪಾವತಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆಯಲ್ಲಿ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯವರಿಗೆ ಪದ್ಯೋನ್ನತಿ ನೀಡಿ ವೇತನ ಹೆಚ್ಚಳ ಮಾಡಿ ಪಾವತಿಸಿರುವ ವೇತನವನ್ನು ಆಯಾಯ ಸಿಬ್ಬಂದಿಯವರಿಂದ ವಸೂಲಾತಿ ಮಾಡುವಂತೆ ಲೆಕ್ಕ ಪರಿಶೋಧಕರು ಸೂಚಿಸಿರುವ ಹಿನ್ನೆಲೆಯಲ್ಲಿ ಅವರಿಗೆ ಆಕ್ಷೇಪಣೆ ಮತ್ತು ವಸೂಲಾತಿ ಕುರಿತು ನೋಟೀಸ್ ನೀಡುವಂತೆ ಹಾಗೂ ಸದರಿ ಆಕ್ಷೇಪಣೆಯು ಲೆಕ್ಕಪರಿಶೋಧಕರಿಂದ ಕೈಬಿಟ್ಟಿಲ್ಲದೇ ಇರುವುದರಿಂದ ಮಾನ್ಯ ಉಚ್ಛ ನ್ಯಾಯಾಲಯವು ಹೊರಡಿಸಿರುವ ಮಧ್ಯಾಂತರ ಆದೇಶದಂತೆ ಹಾಗೂ ಸರ್ಕಾರದ ಆದೇಶದಂತೆ ಮಾನವೀಯ ದೃಷ್ಠಿಯಿಂದ ಈ ಹಿಂದೆ ಕಾರ್ಯನಿರ್ವಹಿಸಿ ವಿಶ್ವವಿದ್ಯಾಲಯದ ಸೇವೆಯಿಂದ ಹೊರಗುಳಿದಿರುವ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯವರಿಗೆ 2018 ರಲ್ಲಿ ಪದ್ಯೋನ್ನತಿ ನೀಡುವ ಮೊದಲು ಪಾವತಿಸುತ್ತಿದ್ದ ರೀತಿಯಲ್ಲಿ ಹಿಂದಿನ ವೇತನವನ್ನು ಪಾವತಿಸುವಂತೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 2 | ವಿಶ್ವವಿದ್ಯಾಲಯದ ಸ್ಥಳೀಯ ವಿಚರಣಾ ಸಮಿತಿಗಳಿಗೆ ವಿಷಯ ಪಾರಂಗತರನ್ನು ಹಾಗೂ ಶೈಕ್ಷಣಿಕ ತಜ್ಞರನ್ನು ನೇಮಿಸುವ ಅವಶ್ಯಕತೆಯನ್ನು ಮನಗಂಡು ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಳೀಯ ವಿಚರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸದಸ್ಯ/ ಅಧ್ಯಕ್ಷರನ್ನಾಗಿ ನೇಮಿಸದೇ ಕೇವಲ ವಿಷಯ ಪರಿಣಿತರನ್ನು / ಶಿಕ್ಷಣ ತಜ್ಞರನ್ನು ನೇಮಿಸಲು, ಮುಂದುವರಿದು ಸಿಂಡಿಕೇಟ್ ಸದಸ್ಯರನ್ನು, ಸ್ಥಳೀಯ ಪರಿಶೀಲನಾ ಸಮಿತಿಯ ಅಧ್ಯಕ್ಷರನ್ನಾಗಿ/ ಸದಸ್ಯರನ್ನಾಗಿ ನೇಮಿಸದಿರಲು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಸೂಚಿಸಿ ಪತ್ರ ಸಂಖ್ಯೆ: ಇಡಿ 94 ಯುಜಿವಿ 2022, ದಿನಾಂಕ:24.11.2022 ರಂದು ಹೊರಡಿಸಿರುವ ಸರ್ಕಾರದ ಸುತ್ತೋಲೆಯ ಪ್ರಸ್ತಾವ.<br>ನಿರ್ಣಯ:– ವಿಶ್ವವಿದ್ಯಾಲಯದ ಸ್ಥಳೀಯ ವಿಚರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸದಸ್ಯ/ ಅಧ್ಯಕ್ಷರನ್ನಾಗಿ ನೇಮಿಸದೇ ಕೇವಲ ವಿಷಯ ಪರಿಣಿತರನ್ನು / ಶಿಕ್ಷಣ ತಜ್ಞರನ್ನು ನೇಮಿಸಲು, ಮುಂದುವರಿದು ಸಿಂಡಿಕೇಟ್ ಸದಸ್ಯರನ್ನು, ಸ್ಥಳೀಯ ಪರಿಶೀಲನಾ ಸಮಿತಿಯ ಅಧ್ಯಕ್ಷರನ್ನಾಗಿ/ ಸದಸ್ಯರನ್ನಾಗಿ ನೇಮಿಸದಿರಲು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಸೂಚಿಸಿ ಪತ್ರ ಸಂಖ್ಯೆ: ಇಡಿ 94 ಯುಜಿವಿ 2022, ದಿನಾಂಕ:24.11.2022 ರಂದು ಹೊರಡಿಸಿರುವ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸುವಂತೆ ಸಭೆಯು ಅನುಮೋದಿಸಿತು. |

| | |
|---|---|
| 3 | ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಬೋಧಕೇತರ ಹುದ್ದೆಗಳ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯಲ್ಲಿ ಕೆಲವು ನ್ಯೂನತೆ/ಮುದ್ರಣ ದೋಷಗಳು ಕಂಡುಬಂದಿದ್ದು ಅವುಗಳನ್ನು ಸರಿಪಡಿಸಿ ವಿಶ್ವವಿದ್ಯಾಲಯದ ಶಾಸನಬದ್ಧ ಸಂಸ್ಥೆಯ ಅನುಮೋದನೆ ಮತ್ತು ಸಹಿಗಳೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ತ್ರಿಪ್ರತಿಯಲ್ಲಿ ಸಲ್ಲಿಸುವಂತೆ ತಿಳಿಸಿರುವ ಸರ್ಕಾರದ ಪತ್ರ ಸಂಖ್ಯೆ:ಇಡಿ 271 ಯುಎನ್ಇ 2022, ದಿನಾಂಕ:30.11.2022 ರ ಪತ್ರದ ಪ್ರಸ್ತಾವ ಮತ್ತು ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವ ಪ್ರಸ್ತಾವ.<br><br>**ನಿರ್ಣಯ:– ಸರ್ಕಾರವು ಎಲ್ಲಾ ವಿಶ್ವವಿದ್ಯಾಲಯಗಳಿಗೆ ಏಕರೂಪವಾಗಿ ಅನ್ವಯವಾಗುವಂತೆ ಸಿದ್ಧಪಡಿಸಿರುವ ವಿವಿಧ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯನ್ನು ಜಾರಿಗೆ ತರುತ್ತಿರುವುದರಿಂದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯಲ್ಲಿ ಇದ್ದ ಕೆಲವು ನ್ಯೂನತೆ/ಮುದ್ರಣ ದೋಷಗಳನ್ನು ವಿಶ್ವವಿದ್ಯಾಲಯದಲ್ಲಿ ದಿನಾಂಕ:21.12.2022 ರಂದು ಜರುಗಿದ ಪರಿನಿಯಮಾವಳಿ/ವಿನಿಯಮಾವಳಿ ರಚನಾ ಸಮಿತಿ ಸಭೆಯು ಸರಿಪಡಿಸಿದ್ದ ವಿವಿಧ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.** |
| 4 | ಮಂಜೂರಾಗಿರುವ ವಿವಿಧ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧವಾಗಿ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧವಾಗಿ ವಿಶ್ವವಿದ್ಯಾಲಯವು ಸರ್ಕಾರಕ್ಕೆ ಸಲ್ಲಿಸಿದ್ದ ಬೋಧಕ ಹುದ್ದೆಗಳ ಪರಿನಿಯಮಾವಳಿಯನ್ನು ನಿಯಮಾನುಸಾರ ಪರಿಶೀಲಿಸಲಾಗಿದೆ. ಸದರಿ ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಪರಿಶೀಲಿಸಿ ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಅಧಿನಿಯಮಿತವಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುವ ಸರ್ಕಾರದ ಪತ್ರ ಸಂಖ್ಯೆ:ಇ–ಕಛೇರಿಸಂ:ಇಡಿ 489 ಯುಬಿವಿ 2022, ದಿನಾಂಕ:08.12.2022 ರ ಪತ್ರದ ಪ್ರಸ್ತಾವ ಮತ್ತು ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವ ಪ್ರಸ್ತಾವ.<br><br>**ನಿರ್ಣಯ:– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಸರ್ಕಾರಕ್ಕೆ ಸಲ್ಲಿಸಿದ್ದ ವಿವಿಧ ಬೋಧಕ ಹುದ್ದೆಗಳ ಪರಿನಿಯಮಾವಳಿಯನ್ನು ನಿಯಮಾನುಸಾರ ವಿಶ್ವವಿದ್ಯಾಲಯದಲ್ಲಿ ದಿನಾಂಕ:21.12.2022 ರಂದು ಜರುಗಿದ ಪರಿನಿಯಮಾವಳಿ/ವಿನಿಯಮಾವಳಿ ರಚನಾ ಸಮಿತಿಯು ಪರಿಶೀಲಿಸಿ ಸರಿಪಡಿಸಿದ್ದ ವಿವಿಧ ಬೋಧಕ ಹುದ್ದೆಗಳ ವೃಂದ ಮತ್ತು ನೇಮಕಾತಿಯ ಪರಿಷ್ಕೃತ ಪರಿನಿಯಮಾವಳಿಯನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಿ ಘನತೆವೆತ್ತ ಕುಲಾಧಿಪತಿಯವರ ಅನುಮೋದನೆಯನ್ನು ಪಡೆದುಕೊಳ್ಳಲು ಸಭೆಯು ಅನುಮೋದಿಸಿತು.** |
| 5 | ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಖಾಸಗಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿವಿಧ ಸರ್ಟಿಫಿಕೇಟ್, ಡಿಪ್ಲೊಮೋ, ಪಿ ಜಿ ಡಿಪ್ಲೊಮೋ ಕೋರ್ಸ್, ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸಲು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದ ಪರಿನಿಯಮಾವಳಿ ಅಂಶಗಳಿಗೆ ಸ್ಪಷ್ಟೀಕರಣ ನೀಡುವಂತೆ ತಿಳಿಸಿರುವ ಸರ್ಕಾರದ ಪತ್ರ ಸಂಖ್ಯೆ:ಇಡಿ 53 ಯುಎನ್ಇ 2022, ದಿನಾಂಕ:08.12.2022 ರ ಪತ್ರದ ಪ್ರಸ್ತಾವ ಮತ್ತು ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವ ಪ್ರಸ್ತಾವ. |

| | |
|---|---|
| | **ನಿರ್ಣಯ:- ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವಿವಿಧ ಸರ್ಟಿಫಿಕೇಟ್, ಡಿಪ್ಲೊಮೋ, ಒಂದು ವರ್ಷದ ಪಿ ಜಿ ಡಿಪ್ಲೊಮೋ ಕೋರ್ಸ್‌ಗಳನ್ನು ನಡೆಸಲು ವಿಶ್ವವಿದ್ಯಾಲಯವು ಖಾಸಗಿ ಸಂಸ್ಥೆಗಳೊಂದಿಗೆ ಹಾಗೂ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯದಲ್ಲಿ ದಿನಾಂಕ:21.12.2022 ರಂದು ಜರುಗಿದ ಪರಿನಿಯಮಾವಳಿ/ವಿನಿಯಮಾವಳಿ ರಚನಾ ಸಮಿತಿಯು ಸ್ಪಷ್ಟೀಕರಿಸಿ ಸಿದ್ಧಪಡಿಸಿ ಸಲ್ಲಿಸಿದ್ದ ಪರಿನಿಯಮಾವಳಿಯನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.** |
| **6** | ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ 2022-23 ನೇ ಶೈಕ್ಷಣಿಕ ಸಾಲಿಗೆ ಅಗತ್ಯವಿರುವ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಸಂಬಂಧದ ಸಂದರ್ಶನದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಕಛೇರಿ ಆದೇಶ ನೀಡಲು ಅನುಮೋದನೆ ಪಡೆಯುವ ಪ್ರಸ್ತಾವ.<br><br>**ನಿರ್ಣಯ: ವಿಶ್ವವಿದ್ಯಾಲಯಕ್ಕೆ 2022-23 ನೇ ಶೈಕ್ಷಣಿಕ ಸಾಲಿಗೆ ಅಗತ್ಯವಿರುವ ಅತಿಥಿ ಉಪನ್ಯಾಸಕರನ್ನು ವಿಶ್ವವಿದ್ಯಾಲಯದ ಕಾರ್ಯಭಾರಕ್ಕೆ ಅನುಗುಣವಾಗಿ ನೇಮಕ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.** |
| **7** | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಆಸು) 22 ಸಗ್ರನಿ 2021, ಬೆಂಗಳೂರು, ದಿನಾಂಕ:14.02.2022 ರ ಸರ್ಕಾರದ ನಡಾವಳಿಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಅಧಿಕಾರಿಗಳು ಕಛೇರಿ ಉಪಯೋಗಕ್ಕಾಗಿ ಪಡೆಯುವ ದಿನಪತ್ರಿಕೆ/ನಿಯತ ಕಾಲಿಕೆಗಳ ವೆಚ್ಚವನ್ನು ಸರ್ಕಾರದಿಂದ ಮರುಪಾವತಿಸಿಕೊಳ್ಳುವ ಸಂಬಂಧ ಈ ಹಿಂದೆ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿ ಮಾಸಿಕ ಮೊತ್ತವನ್ನು ನಿಗದಿಗೊಳಿಸಿ ಆದೇಶಿಸಿರುವ ಸರ್ಕಾರದ ನಡವಳಿಯ ಪ್ರಸ್ತಾವ.<br><br>**ನಿರ್ಣಯ: ಇದು ಸಚಿವಾಲಯದ ಆದೇಶವಾಗಿರುವುದರಿಂದ ಇದನ್ನು ಪರಿಗಣಿಸುವ ಮೊದಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ನಿಯಮ/ ವಿಶ್ವವಿದ್ಯಾಲಯಗಳ ಆದೇಶಗಳನ್ನು ಪರಿಶೀಲಿಸಿ ಕ್ರಮ ವಹಿಸಲು ಸಭೆಯು ಸೂಚಿಸಿತು. ಈ ಚರ್ಚೆಯಲ್ಲಿ ಕುಲಪತಿಗಳ ನಿಯಮ ಮತ್ತು ಷರತ್ತುಗಳನ್ನು ಒಳಗೊಂಡ ಕುಲಾಧಿಪತಿಯವರ ಆದೇಶದಂತೆ ಎಲ್ಲಾ ಸೌಲಭ್ಯವನ್ನು ಒದಗಿಸಲು ಸಭೆಯು ಅನುಮೋದಿಸಿತು.** |
| **8** | **ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.** |
| **8.1** | ವಿಶ್ವವಿದ್ಯಾಲಯದ 5 ಮತ್ತು 6 ನೇ ಘಟಿಕೋತ್ಸವವನ್ನು ಆಯೋಜಿಸಲು ಮತ್ತೊಮ್ಮೆ ಅನುಮೋದನೆ ಕೋರಿರುವ ಪ್ರಸ್ತಾವ.<br><br>**ನಿರ್ಣಯ: ಘನತೆವೆತ್ತ ರಾಜ್ಯಪಾಲರಿಗೆ ರಾಜಭವನದ ಸಭಾಂಗಣದಲ್ಲಿ ವಿಶ್ವವಿದ್ಯಾಲಯದ 5 ಮತ್ತು 6 ನೇ ಘಟಿಕೋತ್ಸವವನ್ನು ಆಯೋಜಿಸಲು ಅನುಮತಿಯನ್ನು ವಿಶ್ವವಿದ್ಯಾಲಯವು ಕೋರಲಾಗಿತ್ತು. ಆದರೆ ಘನತೆವೆತ್ತ ರಾಜ್ಯಪಾಲರ ಕಾರ್ಯಾಲಯದ ಪತ್ರದಲ್ಲಿ ಮೈಸೂರಿನಲ್ಲೆ ಘಟಿಕೋತ್ಸವವನ್ನು ಆಯೋಜಿಸಲು ಸೂಚಿಸಿರುವುದರಿಂದ ಹಾಗೂ ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾಂಗದ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ವಿಶ್ವವಿದ್ಯಾಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದರಿಂದ ಸಿದ್ಧತೆಗಳು ಈಗ ಪೂರ್ಣಗೊಂಡಿದ್ದು ಘನತೆವೆತ್ತ ರಾಜ್ಯಪಾಲರ ಕಾರ್ಯಾಲಯವು ದಿನಾಂಕ:18.02.2022 ರಂದು ಹೊರಡಿಸಿರುವ ಸುತ್ತೋಲೆಯ ಅಂಶಗಳಂತೆ/ ನಿರ್ದೇಶನದಂತೆ 5 ಮತ್ತು 6 ನೇ ಘಟಿಕೋತ್ಸವದ ಪ್ರಕ್ರಿಯೆಗೆ ಸಭೆಯು ಒಪ್ಪಿಗೆ ನೀಡಿತು.** |

| | |
|---|---|
| 8.2 | ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ದೊರಕಿಸಿಕೊಳ್ಳಲು ಒಪ್ಪಿಗೆ ಕೋರಿರುವ ಪ್ರಸ್ತಾವ.<br><br>**ನಿರ್ಣಯ: ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಇ-ಟೆಂಡರ್ ಆಹ್ವಾನಿಸಿದ್ದು ಸದರಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವುದನ್ನು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 24 ಯುಆರ್‌ಸಿ 2010, ದಿನಾಂಕ:08.08.2012 ರಲ್ಲಿ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಬೋಧಕೇತರ ಹುದ್ದೆಗಳಲ್ಲಿ ಕ್ರಮ ಸಂಖ್ಯೆ: 01 ರಿಂದ 07 ಬೋಧಕೇತರ ಹುದ್ದೆಗಳನ್ನು ನಿಯೋಜನೆ/ಎರವಲು ಸೇವೆ ಮೇಲೆ ಪಡೆಯಲು ಸರ್ಕಾರವು ಆದೇಶದಲ್ಲಿ ತಿಳಿಸಿರುವಂತೆ ಕಿರಿಯ ಸಹಾಯಕರು-03, ಹಿರಿಯ ಸಹಾಯಕರು-01, ಅಧೀಕ್ಷರು-01 ಹಾಗೂ ಲೆಕ್ಕ ಸಹಾಯಕರು-02 ಇವರನ್ನು ವಿಶ್ವವಿದ್ಯಾಲಯಕ್ಕೆ ನಿಯೋಜನೆ/ಎರವಲು ಸೇವೆ ಮೇಲೆ ಒದಗಿಸಿಕೊಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸಮಾರು 10 ತಿಂಗಳುಗಳಾಗಿದ್ದರು ಇಲ್ಲಿಯವರೆಗೆ ನಿಯೋಜನೆ/ಎರವಲು ಸೇವೆ ಮೇಲೆ ಒದಗಿಸಿಲ್ಲದೆ ಇರುವುದರಿಂದ ಸಭೆಯು ಸುಧೀರ್ಘವಾಗಿ ಚರ್ಚಿಸಿ ಸದರಿ ಹುದ್ದೆಗಳು ಭರ್ತಿ ಆಗುವವರೆಗೆ ಹೊರಸಂಪನ್ಮೂಲದಿಂದ ಭರ್ತಿಮಾಡಿಕೊಳ್ಳಲು ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡುವಂತೆ ಸಭೆಯು ಸೂಚಿಸಿತು.** |

ಅಂತಿಮವಾಗಿ ಸಭೆಯ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರು ಸಭೆಯನ್ನು ಯಶಸ್ವಿಗೊಳಿಸಿದ ಮಾನ್ಯ ಅಧ್ಯಕ್ಷರಿಗೆ ಹಾಗೂ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**ಕುಲಸಚಿವರು**
**ಪದನಿಮಿತ್ತ ಸದಸ್ಯ ಕಾರ್ಯದರ್ಶಿ**
**ಪ್ರಶಾಸನ ಸಮಿತಿ**

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನ
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾ
ಮೈಸೂರು-570 004

**ಕುಲಪತಿ**
**ಅಧ್ಯಕ್ಷರು ಪ್ರಶಾಸನ ಸಮಿತಿ**

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004